# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 934 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21/09/2022 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದೆಹಲಿಯ ಕರ್ನಾಟಕ ಭವನ 1-3 ಭವನಗಳು ಯಾವ ವರ್ಷದಲ್ಲಿ ನಿರ್ಮಾಣವಾಗಿವೆ; ಮೂರು ಭವನಗಳಿಗೆ ತಗುಲಿರುವ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು) | ದೆಹಲಿಯ ಕರ್ನಾಟಕ ಭವನ 1-3 ಭವನಗಳು ನಿರ್ಮಾಣವಾದ ವರ್ಷ ಹಾಗೂ ತಗುಲಿರುವ ವೆಚ್ಚದ ವಿವರಗಳು. (ಕೆಳಗಿನ ಕೋಷ್ಟಕ) |
| ಆ) | ಈ ಮೂರೂ ಭವನಗಳಿಗೆ ಮಂಜೂರಾಗಿರುವ ಐ.ಎ.ಎಸ್ ಹುದ್ದೆಗಳು ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಅಧಿಕಾರಿ / ಸಿಬ್ಬಂದಿಗಳೆಷ್ಟು ಹಾಗೂ ಗುತ್ತಿಗೆ ಆಧಾರದ ಮೇಲೆ ಅಥವಾ ನಿಯೋಜನ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳೆಷ್ಟು; (ವಿವರ ನೀಡುವುದು) | ಈ ಮೂರು ಭವನಗಳಿಗೆ ಮಂಜೂರಾಗಿರುವ ಐ.ಎ.ಎಸ್. ಹುದ್ದೆಗಳ ಸಂಖ್ಯೆ: 02 ಹಾಗೂ ಪ್ರಸ್ತುತ 2 ಜನ ಐ.ಎ.ಎಸ್. ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಕರ್ನಾಟಕ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧಿಕಾರಿ/ಸಿಬ್ಬಂದಿ ಹಾಗೂ ಗುತ್ತಿಗೆ ಆಧಾರದ ಮೇಲೆ ಅಥವಾ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳು: (ಕೆಳಗಿನ ಕೋಷ್ಟಕ) |

ಅ) ಉತ್ತರದ ಕೋಷ್ಟಕ:

| ಕ್ರ. ಸಂ. | ಕಟ್ಟಡಗಳು | ನಿರ್ಮಾಣವಾದ ವರ್ಷ | ತಗಲಿರುವ ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| 01 | ಕರ್ನಾಟಕ ಭವನ - 1 (ಅನೆಕ್ಸ್) | 2010 | 3600.00 |
| 02 | ಕರ್ನಾಟಕ ಭವನ - 2 (ಶರಾವತಿ) | 1988 | 20.50 |
| 03 | ಕರ್ನಾಟಕ ಭವನ - 3 (ಭೀಮಾ) | 1988 | 976.00 |

ಆ) ಉತ್ತರದ ಕೋಷ್ಟಕ:

| ಕ್ರ.ಸಂ. | ಅಧಿಕಾರಿ/ಸಿಬ್ಬಂದಿಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 01 | ಖಾಯಂ ಅಧಿಕಾರಿ /ಸಿಬ್ಬಂದಿಗಳು | 131 |
| 02 | ಗುತ್ತಿಗೆ ಆಧಾರದ ಮೇಲೆ | 00 |
| 03 | ಹೊರಗುತ್ತಿಗೆ | 83 |
| 04 | ನಿಯೋಜನೆ ಮೇಲೆ | 05 |
| 05 | ಸಮಾಲೋಚಕರು | 02 |

<table>
<tr>
<td>ಇ)</td>
<td>ಕರ್ನಾಟಕ ಭವನಗಳಲ್ಲಿರುವ ವಾಹನಗಳೆಷ್ಟು; ಯಾವ ಯಾವ ಶ್ರೇಣಿಯ ಅಧಿಕಾರಿ ಮತ್ತು ಜನ ಪ್ರತಿನಿಧಿಗಳಿಗೆ ವಾಹನ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ; ಸದರಿ ವಾಹನಗಳಿಗೆ ಪ್ರತಿ ತಿಂಗಳು ಖರ್ಚಾಗುವ ಇಂಧನ ಎಷ್ಟು, (ಲೀಟರ್ ಗಳಲ್ಲಿ) ಹಾಗೂ ಸದರಿ ವಾಹನಗಳು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಿಲೋ ಮೀಟರ್ ಸಂಚಾರ ಮಾಡಿರುತ್ತವೆ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)</td>
<td>ಕರ್ನಾಟಕ ಭವನದಲ್ಲಿ ಒಟ್ಟು 35 ವಾಹನಗಳಿರುತ್ತವೆ. ಇವುಗಳಲ್ಲಿ 01 ವಾಹನ ಮಾನ್ಯ ರಾಜ್ಯಪಾಲರಿಗೆ, 01 ವಾಹನ ಮಾನ್ಯ ಮುಖ್ಯ ಮಂತ್ರಿಯವರಿಗೆ ಮೀಸಲಿರಿಸಲಾಗಿದೆ. 2 ವಾಹನಗಳು (ಒಂದು ಕಾರು ಮತ್ತು ಒಂದು ಬಸ್ಸು) ಕೆ.ಎಸ್.ಆರ್.ಪಿ. ಪಡೆಗಳಿಗೆ ಮೀಸಲಾಗಿರುತ್ತದೆ. ಇನ್ನುಳಿದ 31 ವಾಹನಗಳನ್ನು ಕರ್ನಾಟಕ ಭವನಕ್ಕೆ ಆಗಮಿಸುವ ಅತಿಗಣ್ಯ ಮತ್ತು ಗಣ್ಯ ವ್ಯಕ್ತಿಗಳಿಗೆ, ಮಂತ್ರಿವರ್ಯರುಗಳಿಗೆ, ಮಾನ್ಯ ಸಂಸತ್ ಸದಸ್ಯರುಗಳಿಗೆ, ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರುಗಳಿಗೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ನಿರ್ದೇಶಕರ ಹುದ್ದೆಯ ಮೇಲ್ಪಟ್ಟ ಅಧಿಕಾರಿ ವೃಂದದವರುಗಳಿಗೆ ಹಾಗೂ ಇನ್ನಿತರ ಗಣ್ಯ ವ್ಯಕ್ತಿಗಳಿಗೆ ವಾಹನ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br><br>ಸದರಿ ವಾಹನಗಳಿಗೆ ಪ್ರತಿ ತಿಂಗಳು ಖರ್ಚಾಗುವ ಇಂಧನ(ಲೀಟರ್‌ಗಳಲ್ಲಿ), ಕಳೆದ ಮೂರು ವರ್ಷಗಳಲ್ಲಿ ಸಂಚಾರ ಮಾಡಿದ ಕಿಲೋಮೀಟರ್ ವಿವರಗಳನ್ನು <u>ಅನುಬಂಧ-1</u> ರಲ್ಲಿ ಲಗತ್ತಿಸಲಾಗಿದೆ.</td>
</tr>
<tr>
<td>ಈ)</td>
<td>ಕರ್ನಾಟಕ ಭವನ -1, 2 ಮತ್ತು 3 ರಲ್ಲಿರುವ ಉಪಹಾರ ಗೃಹಗಳ ನಿರ್ವಹಣೆ ಮಾಡುವ ಅಧಿಕಾರಿಗಳ ಶ್ರೇಣಿಯ ಮಾಹಿತಿಯನ್ನು ನೀಡುವುದು; ಕಳೆದ ಮೂರು ವರ್ಷಗಳಲ್ಲಿ ಸದರಿ ಉಪಹಾರ ಗೃಹಗಳಿಗೆ ಖರ್ಚಾದ ಮೊತ್ತ ಎಷ್ಟು ಹಾಗೂ ಅವುಗಳಿಂದ ಬಂದಿರುವ ಆದಾಯ ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)</td>
<td>ಕರ್ನಾಟಕ ಭವನ-1, ಮತ್ತು 2 ರಲ್ಲಿರುವ ಉಪಾಹಾರ ಗೃಹಗಳ ನಿರ್ವಹಣೆಯನ್ನು ಗ್ರೂಪ್-ಸಿ ಶ್ರೇಣಿಯ ವ್ಯವಸ್ಥಾಪಕ ವೃಂದದವರು ನಿರ್ವಹಣೆ ಮಾಡುತ್ತಿದ್ದಾರೆ.<br><br>ಕರ್ನಾಟಕ ಭವನ-3 ರಲ್ಲಿ ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯವರು ಉಪಾಹಾರ ಗೃಹದ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ.<br><br>ಕಳೆದ ಮೂರು ವರ್ಷಗಳಲ್ಲಿ ಉಪಹಾರ ಗೃಹಗಳಿಗ ಖರ್ಚಾದ ಹಾಗೂ ಅವುಗಳಿಂದ ಬಂದಿರುವ ಆದಾಯದ ಮೊತ್ತದ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ ಸಂ</th><th>ವರ್ಷವಾರು</th><th>ಖರ್ಚಾದ ಮೊತ್ತ</th><th>ಆದಾಯದ ಮೊತ್ತ</th></tr>
<tr><td colspan="4">ಕರ್ನಾಟಕ ಭವನ-1 (ಕಾವೇರಿ)</td></tr>
<tr><td>1</td><td>2019-20</td><td>4646967</td><td>3339770</td></tr>
<tr><td></td><td>2020-21</td><td>1127193</td><td>1052940</td></tr>
<tr><td></td><td>2021-22</td><td>2861166</td><td>2769526</td></tr>
<tr><td colspan="4">ಕರ್ನಾಟಕ ಭವನ-2(ಶರಾವತಿ)</td></tr>
<tr><td>2</td><td>2019-20</td><td>3640393</td><td>34446704</td></tr>
<tr><td></td><td>2020-21</td><td>1660476</td><td>1515018</td></tr>
<tr><td></td><td>2021-22</td><td>1763204</td><td>1413407</td></tr>
<tr><td colspan="4">ಕರ್ನಾಟಕ ಭವನ-3 (ಭೀಮಾ)</td></tr>
<tr><td>3</td><td>2019-20</td><td>1891478</td><td>2849574</td></tr>
<tr><td></td><td>2020-21</td><td>KSTDC</td><td>KSTDC</td></tr>
<tr><td></td><td>2021-22</td><td>KSTDC</td><td>KSTDC</td></tr>
</table>
</td>
</tr>
</table>

| | | |
|---|---|---|
| ಉ) | ಕರ್ನಾಟಕ ಭವನ -3 ರಲ್ಲಿ ಕೆ.ಎಸ್.ಟಿ.ಡಿ.ಸಿ ರವರು ಎಷ್ಟು; ವರ್ಷಗಳಿಂದ ಉಪಹಾರ ಗೃಹದ ನಿರ್ವಹಣೆ ಮಾಡುತ್ತಿದ್ದಾರೆ ಇಲ್ಲಿ ಕೋಣೆಗಳ ಸೇವೆಯನ್ನು ಮಾಡದೆ ಲಿಫ್ಟ್ ವ್ಯವಸ್ಥೆ ಸರಿಯಾಗಿ ಇಲ್ಲದೆ ಮತ್ತು ಸ್ವಾಗತಗಾರರ ಕೌಂಟರ್ ನಲ್ಲಿ ರೂಂ ಸರ್ವೀಸ್ ನೀಡಲಾಗುವುದಿಲ್ಲ ಎಂಬ ಭಿತ್ತಿ ಫಲಕಗಳನ್ನು ಅಳವಡಿಸಿರುವುದಕ್ಕೆ ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/ 90/ ಹೆಚ್.ಎಂ.ಬಿ/ 2019, ದಿನಾಂಕ:12.03.2020ರನ್ವಯ ಕರ್ನಾಟಕ ಭವನ -3 (ಭೀಮಾ)ನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ದಿನಾಂಕ:24.03.2020 ರಂದು ಒಡಂಬಡಿಕೆ ಮಾಡಿಕೊಂಡು ಉಪಹಾರ ಗೃಹದ ನಿರ್ವಹಣೆ ಮಾಡುತ್ತಿದ್ದಾರೆ.<br><br>ವ್ಯವಸ್ಥಾಪಕರು, ಕ.ರಾ.ಪ್ರ.ಅ.ನಿ.ನಿ, ಕರ್ನಾಟಕ ಭವನ -3, ನವದೆಹಲಿ ಇವರು ಭಿತ್ತಿ ಫಲಕಗಳನ್ನು ಅಳವಡಿಸಿರುವುದಕ್ಕೆ ನೀಡಿರುವ ಕಾರಣಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| ಊ) | ಇಲ್ಲಿ ಸಾರ್ವಜನಿಕರಿಗೆ ಸರಿಯಾದ ಸೇವೆ ಲಭ್ಯವಾಗದೇ ಮಕ್ಕಳು, ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗೆ ಯಾವುದೇ ವಿಶೇಷ ಸೌಲಭ್ಯಗಳು ದೊರಕದ ಇರುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ನವದೆಹಲಿಯಲ್ಲಿನ ಮೂರು ಕರ್ನಾಟಕ ಭವನಗಳಲ್ಲಿ ಗಾಲಿ ಕುರ್ಚಿ, ಶೌಚಾಲಯ ಮತ್ತು Ramp ವ್ಯವಸ್ಥೆ ಮಾಡಲಾಗಿದೆ.<br><br>ಸಾರ್ವಜನಿಕರಿಂದ ಕೋರಿಕೆ ಬಂದಲ್ಲಿ ಕರ್ನಾಟಕ ಭವನವು ರೂಂ ಸರ್ವೀಸ್, ವೈದ್ಯಕೀಯ ಸೇವೆಯಂತಹ ಸೌಲಭ್ಯಗಳನ್ನು ಒದಗಿಸುತ್ತದೆ. |

**ಸಂಖ್ಯೆ: ಲೋಇ 41 ಬಿಎಲ್ ಕ್ಯೂ 2022**

**(ಸಿ.ಸಿ. ಪಾಟೀಲ)**
ಲೋಕೋಪಯೋಗಿ ಸಚಿವರು

ಅನುಬಂಧ-4

| Sl No | Vehicle No | Fuel used in Litres (month wise) for the year 2021-22 | | | | | | | | | | | |
|---|---|---|---|---|---|---|---|---|---|---|---|---|---|
| | | Apr-21 | May-21 | Jun-21 | Jul-21 | Aug-21 | Sep-21 | Oct-21 | Nov-21 | Dec-21 | Jan-22 | Feb-22 | Mar-22 |
| 1 | KA01 GA 3041 | 30 | 0 | 30 | 210 | 150 | 60 | 120 | 120 | 180 | 0 | 270 | 0 |
| 2 | KA01 GA 3042 | 90 | 150 | 60 | 190 | 150 | 120 | 90 | 0 | 60 | 30 | 0 | 180 |
| 3 | KA01 GA 3043 | 30 | 0 | 120 | 150 | 90 | 60 | 60 | 150 | 120 | 30 | 150 | 180 |
| 4 | KA01 GA 3044 | 60 | 30 | 60 | 150 | 211 | 90 | 120 | 60 | 60 | 30 | 150 | 0 |
| 5 | KA01 GA 3045 | 25 | 0 | 60 | 120 | 150 | 120 | 60 | 30 | 60 | 0 | 120 | 90 |
| 6 | KA01 GA 3046 | 90 | 30 | 70 | 50 | 150 | 60 | 60 | 30 | 30 | 0 | 90 | 120 |
| 7 | KA01 GA 3047 | 120 | 120 | 134 | 150 | 148 | 120 | 90 | 119 | 120 | 30 | 60 | 180 |
| 8 | KA01 GA 3048 | 60 | 30 | 60 | 240 | 60 | 60 | 150 | 100 | 210 | 30 | 180 | 150 |
| 9 | KA01 GA 3049 | 30 | 120 | 60 | 235 | 178 | 115 | 125 | 200 | 125 | 100 | 150 | 100 |
| 10 | KA01 GA 3050 | 0 | 0 | 0 | 60 | 149 | 60 | 90 | 90 | 90 | 30 | 0 | 150 |
| 11 | KA01 GA 3051 | 25 | 0 | 50 | 125 | 75 | 0 | 0 | 25 | 100 | 25 | 25 | 210 |
| 12 | KA01 GA 3052 | 25 | 0 | 25 | 75 | 50 | 125 | 75 | 75 | 75 | 50 | 100 | 150 |
| 13 | KA01 GA 3053 | 30 | 60 | 210 | 179 | 210 | 119 | 60 | 30 | 180 | 90 | 172 | 180 |
| 14 | KA01 GA 3054 | 0 | 0 | 90 | 180 | 120 | 120 | 150 | 120 | 90 | 60 | 119 | 120 |
| 15 | KA01 GA 3055 | 0 | 0 | 60 | 120 | 180 | 90 | 150 | 150 | 120 | 60 | 150 | 257 |
| 16 | KA01 GA 3056 | 0 | 60 | 60 | 60 | 181 | 60 | 120 | 90 | 120 | 60 | 120 | 180 |
| 17 | KA01 GA 3057 | 150 | 60 | 210 | 180 | 200 | 180 | 205 | 180 | 180 | 150 | 125 | 186 |
| 18 | KA01 GA 3058 | 0 | 0 | 30 | 90 | 120 | 60 | 0 | 30 | 90 | 30 | 115 | 210 |
| 19 | KA01 GA 3059 | 0 | 0 | 0 | 162 | 159 | 116 | 59 | 120 | 120 | 90 | 115 | 60 |
| 20 | KA01 GB 3060 | 30 | 0 | 30 | 150 | 90 | 0 | 60 | 30 | 30 | 0 | 0 | 0 |
| 21 | KA01 GA 3061 | 30 | 0 | 90 | 90 | 150 | 90 | 90 | 120 | 90 | 117 | 60 | 180 |
| 22 | KA01 GA 3099 | 40 | 100 | 70 | 240 | 160 | 150 | 150 | 210 | 90 | 60 | 180 | 180 |
| 23 | KA02 GA 6363 | 0 | 98 | 129 | 125 | 87 | 103 | 179 | 122 | 204 | 80 | 211 | 214 |
| 24 | KA04 GA 9000 | 0 | 0 | 60 | 30 | 90 | 60 | 30 | 60 | 90 | 60 | 180 | 180 |
| 25 | KA04 GA 0055 | 30 | 0 | 30 | 135 | 29 | 88 | 90 | 86 | 57 | 29 | 30 | 0 |
| 26 | KA02 GA 9909 | 0 | 72 | 30 | 150 | 131 | 105 | 104 | 120 | 120 | 87 | 60 | 30 |
| 27 | KA01 GB 04 | 0 | 0 | 0 | 30 | 0 | 0 | 0 | 30 | 0 | 0 | 0 | 0 |
| 28 | KA01 GB 9918 | 0 | 0 | 0 | 30 | 60 | 0 | 30 | 0 | 30 | 0 | 30 | 0 |
| 29 | KA03 G 1555 | 319 | 331 | 430 | 345 | 197 | 265 | 245 | 196 | 235 | 202 | 130 | 225 |
| 30 | KA03 G 7135 | 676 | 536 | 432 | 365 | 346 | 261 | 279 | 409 | 415 | 385 | 345 | 420 |

| Sl No | Vehicle No | Fuel used in Litres (month wise) for the year 2020-21 | | | | | | | | | | | |
|---|---|---|---|---|---|---|---|---|---|---|---|---|---|
| | | Apr-20 | May-20 | Jun-20 | Jul-20 | Aug-20 | Sep-20 | Oct-20 | Nov-20 | Dec-20 | Jan-21 | Feb-21 | Mar-21 |
| 1 | KA01 GA 3041 | 132 | 329 | 0 | 0 | 0 | 0 | 30 | 0 | 50 | 80 | 30 | 90 |
| 2 | KA01 GA 3042 | | 0 | 0 | 60 | 30 | 30 | 0 | 0 | 30 | 30 | 0 | 0 |
| 3 | KA01 GA 3043 | | 0 | 0 | 0 | 0 | 120 | 90 | 120 | 90 | 230 | 120 | 180 |
| 4 | KA01 GA 3044 | 65 | 330 | 30 | 150 | 120 | 180 | 60 | 180 | 150 | 120 | 120 | 120 |
| 5 | KA01 GA 3045 | | 0 | 0 | 0 | 0 | 30 | 60 | 90 | 60 | 90 | 90 | 90 |
| 6 | KA01 GA 3046 | 55 | 90 | 30 | 115 | 120 | 240 | 180 | 90 | 180 | 80 | 180 | 210 |
| 7 | KA01 GA 3047 | | 125 | 25 | 50 | 75 | 0 | 25 | 50 | 0 | 30 | 90 | 90 |
| 8 | KA01 GA 3048 | 150 | 379 | 90 | 120 | 150 | 120 | 120 | 0 | 60 | 90 | 150 | 200 |
| 9 | KA01 GA 3049 | 206 | 424 | 60 | 90 | 140 | 180 | 140 | 120 | 60 | 150 | 180 | 180 |
| 10 | KA01 GA 3050 | 40 | 215 | 60 | 60 | 30 | 150 | 60 | 60 | 60 | 60 | 60 | 120 |
| 11 | KA01 GA 3051 | 25 | 100 | 125 | 0 | 50 | 100 | 0 | 25 | 25 | 46 | 100 | 50 |
| 12 | KA01 GA 3052 | | 0 | 25 | 50 | 75 | 50 | 25 | 25 | 100 | 75 | 75 | 75 |
| 13 | KA01 GA 3053 | 60 | 150 | 52 | 126 | 150 | 200 | 90 | 60 | 90 | 150 | 240 | 212 |
| 14 | KA01 GA 3054 | | 0 | 120 | 30 | 60 | 30 | 60 | 30 | 60 | 30 | 30 | 60 |
| 15 | KA01 GA 3055 | | 0 | 30 | 0 | 0 | 60 | 30 | 90 | 0 | 30 | 90 | 120 |
| 16 | KA01 GA 3056 | 30 | 90 | 0 | 60 | 60 | 84 | 30 | 90 | 60 | 60 | 60 | 150 |
| 17 | KA01 GA 3057 | 116 | 294 | 75 | 140 | 150 | 150 | 179 | 85 | 208 | 180 | 180 | 270 |
| 18 | KA01 GA 3058 | 30 | 60 | 30 | 60 | 0 | 110 | 30 | 90 | 60 | 0 | 60 | 90 |
| 19 | KA01 GA 3059 | | 79 | 38 | 80 | 0 | 43 | 57 | 0 | 79 | 80 | 112 | 120 |
| 20 | KA01 GB 3060 | 30 | 0 | 30 | 0 | 0 | 90 | 120 | 30 | 0 | 30 | 0 | 60 |
| 21 | KA01 GA 3061 | 30 | 190 | 30 | 90 | 90 | 120 | 30 | 30 | 90 | 120 | 150 | 120 |
| 22 | KA01 GA 3099 | 40 | 150 | 40 | 40 | 160 | 30 | 40 | 120 | 40 | 110 | 120 | 120 |
| 23 | KA02 GA 6363 | 90 | 90 | 50 | 87 | 100 | 92 | 45 | 116 | 112 | 60 | 171 | 110 |
| 24 | KA04 GA 9000 | | 0 | 30 | 30 | 60 | 120 | 30 | 90 | 60 | 60 | 90 | 88 |
| 25 | KA04 GA 0055 | 28 | 59 | 0 | 0 | 0 | 0 | 0 | 30 | 0 | 25 | 29 | 0 |
| 26 | KA02 GA 9909 | | 0 | 0 | 0 | 0 | 30 | 0 | 30 | 0 | 60 | 120 | 118 |
| 27 | KA01 GB 04 | | 0 | 0 | 0 | 0 | 0 | 0 | 0 | 0 | 0 | 0 | 15 |
| 28 | KA01 GB 9918 | | 0 | 0 | 0 | 0 | 30 | 0 | 0 | 0 | 0 | 0 | 0 |
| 29 | KA03 G 1555 | 72 | 161 | 150 | 199 | 179 | 203 | 325 | 156 | 193 | 375 | 281 | 354 |
| 30 | KA03 G 7135 | 284 | 545 | 410 | 572 | 612 | 568 | 537 | 575 | 190 | 610 | 451 | 501 |

| Sl No | Vehicle No | Fuel used in Litres (month wise) for the year 2019-20 | | | | | | | | | | | |
|---|---|---|---|---|---|---|---|---|---|---|---|---|---|
| | | Apr-19 | May-19 | Jun-19 | Jul-19 | Aug-19 | Sep-19 | Oct-19 | Nov-19 | Dec-19 | Jan-20 | Feb-20 | Mar-20 |
| 1 | KA01 GA 3041 | 205 | 90 | 235 | 150 | 141 | 140 | 120 | 150 | 180 | 150 | 330 | 120 |
| 2 | KA01 GA 3042 | 90 | 90 | 180 | 210 | 180 | 181 | 181 | 90 | 151 | 180 | 120 | 60 |
| 3 | KA01 GA 3043 | 120 | 150 | 180 | 180 | 270 | 181 | 151 | 150 | 150 | 150 | 0 | 120 |
| 4 | KA01 GA 3044 | 166 | 150 | 240 | 240 | 360 | 240 | 210 | 180 | 90 | 150 | 60 | 120 |
| 5 | KA01 GA 3045 | 180 | 90 | 330 | 150 | 236 | 421 | 410 | 175 | 210 | 210 | 215 | 115 |
| 6 | KA01 GA 3046 | 90 | 120 | 181 | 150 | 120 | 120 | 60 | 120 | 181 | 116 | 175 | 133 |
| 7 | KA01 GA 3047 | 50 | 100 | 85 | 100 | 75 | 76 | 100 | 125 | 145 | 50 | 100 | 155 |
| 8 | KA01 GA 3048 | 30 | 180 | 0 | 180 | 210 | 181 | 150 | 120 | 211 | 209 | 209 | 180 |
| 9 | KA01 GA 3049 | 90 | 180 | 90 | 200 | 271 | 225 | 300 | 210 | 120 | 0 | 140 | 179 |
| 10 | KA01 GA 3050 | 180 | 300 | 300 | 270 | 300 | 271 | 200 | 150 | 151 | 150 | 120 | 127 |
| 11 | KA01 GA 3051 | 90 | 180 | 180 | 270 | 150 | 121 | 85 | 150 | 150 | 90 | 151 | 90 |
| 12 | KA01 GA 3052 | 100 | 75 | 126 | 90 | 0 | 100 | 75 | 100 | 50 | 100 | 75 | 44 |
| 13 | KA01 GA 3053 | 175 | 210 | 55 | 210 | 180 | 211 | 150 | 120 | 118 | 265 | 120 | 110 |
| 14 | KA01 GA 3054 | 90 | 210 | 150 | 240 | 210 | 180 | 150 | 150 | 150 | 210 | 120 | 150 |
| 15 | KA01 GA 3055 | 150 | 60 | 90 | 60 | 145 | 180 | 144 | 60 | 0 | 0 | 30 | 60 |
| 16 | KA01 GA 3056 | 90 | 60 | 120 | 210 | 150 | 60 | 30 | 60 | 90 | 90 | 60 | 52 |
| 17 | KA01 GA 3057 | 149 | 169 | 235 | 270 | 180 | 241 | 270 | 210 | 240 | 240 | 210 | 169 |
| 18 | KA01 GA 3058 | 0 | 80 | 40 | 120 | 120 | 81 | 78 | 40 | 38 | 60 | 60 | 60 |
| 19 | KA01 GA 3059 | 95 | 0 | 103 | 215 | 220 | 91 | 158 | 132 | 158 | 140 | 70 | 0 |
| 20 | KA01 GB 3060 | 60 | 150 | 150 | 210 | 180 | 121 | 120 | 120 | 60 | 30 | 61 | 60 |
| 21 | KA01 GA 3061 | 60 | 180 | 150 | 180 | 120 | 121 | 90 | 87 | 180 | 150 | 185 | 119 |
| 22 | KA01 GA 3099 | 0 | 45 | 45 | 168 | 200 | 213 | 270 | 40 | 80 | 202 | 230 | 160 |
| 23 | KA02 GA 6363 | 136 | 40 | 50 | 103 | 0 | 51 | 100 | 49 | 82 | 150 | 127 | 90 |
| 24 | KA04 GA 9000 | 105 | 100 | 150 | 134 | 70 | 50 | 30 | 51 | 115 | 65 | 75 | 75 |
| 25 | KA04 GA 0055 | 125 | 100 | 105 | 125 | 75 | 129 | 100 | 96 | 75 | 130 | 90 | 112 |
| 26 | KA02 GA 9909 | 90 | 91 | 90 | 170 | 90 | 120 | 30 | 90 | 120 | 85 | 120 | 66 |
| 27 | KA01 GB 04 | 0 | 15 | 15 | 0 | 0 | 1 | 0 | 30 | 0 | 0 | 0 | 0 |
| 28 | KA01 GB 9918 | 0 | 0 | 0 | 0 | 60 | 31 | 0 | 0 | 0 | 0 | 0 | 30 |
| 29 | KA03 G 1555 | 0 | 0 | 0 | 0 | 0 | 0 | 30 | 100 | 90 | 60 | 90 | 97 |
| 30 | KA03 G 7135 | 0 | 0 | 0 | 0 | 0 | 0 | 170 | 590 | 551 | 407 | 521 | 548 |

# ಕರ್ನಾಟಕ ಭವನ - 3

## ಕ.ರಾ.ಪ್ರ.ಅ.ನಿ.ನಿ.

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಕಚೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ,
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು-560 022

ಕರ್ನಾಟಕ ಭವನ - 3 (ಭೀಮ)
ನಂ. ಎ-5, ಹುಡ್ಕೋ ಪ್ಲೇಸ್, ಆಂಡ್ರ್ಯೂ ಗಂಜ್,
ಖೇಲ್‌ಗಾನ್ ರಸ್ತೆ, ಹೊಸದಿಲ್ಲಿ - 110 049

ದೂರವಾಣಿ : 011-26252565, 011-26252870 | ಇ-ಮೇಲ್ : karnatakabhavana3@kstdc.co | ವೆಬ್‌ಸೈಟ್ : www.kstdc.co


ಸಂಖ್ಯೆ: ಕ.ರಾ.ಪ್ರ.ಅ.ನಿ.ಕ.ಭ.3/135/2022-23 ದಿನಾಂಕ: 19.09.2022

ಗೆ,

ಹಿರಿಯ ವ್ಯವಸ್ಥಾಪಕರು
ಕರ್ನಾಟಕ ಭವನ
ನವ ದೆಹಲಿ

ಮಾನ್ಯರೇ,

ವಿಷಯ: ದೆಹಲಿ ಕರ್ನಾಟಕ ಭವನ-3(ಭೀಮಾ)ದ ಮೂಲ ಸೌಕರ್ಯಗಳ ಬಗ್ಗೆ.

(ಅ) ಉ: ಮಾಹಿತಿ ಲಭ್ಯವಾಗುವುದಿಲ್ಲ.

(ಆ) ಉ: ಮಾಹಿತಿ ಲಭ್ಯವಾಗುವುದಿಲ್ಲ.

(ಇ) ಉ: ಕೆ.ಎಸ್.ಟಿ.ಡಿ.ಸಿ ಯ ಕೇಂದ್ರ ಕಛೇರಿಯಲ್ಲಿ ಲಭ್ಯವಾಗುತ್ತದೆ.

(ಈ) ಉ: ಕೆ.ಎಸ್.ಟಿ.ಡಿ.ಸಿ ಯ ಕೇಂದ್ರ ಕಛೇರಿಯಲ್ಲಿ ಲಭ್ಯವಾಗುತ್ತದೆ.

(ಉ) ಉ: ಕರ್ನಾಟಕ ಭವನ-3(ಭೀಮಾ) ದಲ್ಲಿ ಕೆ.ಎಸ್.ಟಿ.ಡಿ.ಸಿ ರವರು 24.03.2020 ರಿಂದ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಲಿಫ್ಟ್ ವ್ಯವಸ್ಥೆ ಸರಿಯಾಗಿದೆ. ವಾಸ್ತವ್ಯ ಹೂಡುತ್ತಿರುವ ಅತಿಥಿಗಳಿಗೆ ನಮ್ಮ ಸಂಸ್ಥೆಯಾದ ಕೆ.ಎಸ್.ಟಿ.ಡಿ.ಸಿ. ಹೋಟೆಲ್ ವಿಭಾಗದಲ್ಲಿ ಎಲ್ಲಾ ಹೋಟೆಲ್‌ಗಳಲ್ಲಿ ರೂಮ್ಸ್ ಸರ್ವೀಸ್ ಇರುವುದಿಲ್ಲ ಆದರೇ, ಅತ್ಯಂತ ಅವಶ್ಯಕವಾದ ಸಂದರ್ಭಗಳಲ್ಲಿ ಸರಬರಾಜು ಮಾಡುತ್ತವೆ(ಹಿರಿಯ ನಾಗರಿಕರಿಗೆ, ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಹಾಗೂ ವಿಕಲಚೇತನರಿಗೆ) ಹಾಗೂ ಅತಿ ಗಣ್ಯ ವ್ಯಕ್ತಿಗಳಿಗೆ ಗೌರವ ಸೂಚಕವಾಗಿ ರೂಮ್ ಗೆ ಆಹಾರ ಸರಬರಾಜು ಮಾಡುತ್ತವೆ. ಇದು ನಮ್ಮ ಸಂಸ್ಥೆಯ ಉದ್ದೇಶ ಹಾಗೂ ವ್ಯವಸ್ಥೆಯಾಗಿರುತ್ತದೆ.

ಕೊಠಡಿಯ ವಿಚಾರದ ಸಂಬಂಧ ನಮ್ಮ ಬೆಡ್ಡಿಂಗ್ ವ್ಯವಸ್ಥೆ ಅಚ್ಚ ಬಿಳಿ ಬಟ್ಟೆಯನ್ನು ಉಪಯೋಗಿಸುತ್ತಿದ್ದು, ಬೆಡ್‌ಶೀಟ್, ಪಿಲ್ಲೋ ಕವರ್, ಡುವೆಟ್ ಕವರ್,ಬಾತ್ ಟವಲ್ ಹಾಗೂ ಹ್ಯಾಂಡ್ ಟವಲ್ ಅತ್ಯಂತ ಬಿಳಿಯಾಗಿದ್ದು ಒಂದು ತೊಟ್ಟು ಆಹಾರ ಪದಾರ್ಥವು

ಬಿದ್ದರು ಇಡಿ ಬಟ್ಟೆಯು ಅಸೂಚಿಯಾಗಿ ಕಾಣುತ್ತದೆ ಹಾಗೂ ಲಾಂಡ್ರಿಗೆ ಹಾಕಿದ್ದರು ಸಹಾ ಕಲೆ ಹೋಗುವುದಿಲ್ಲಾ ಕಾರಣ ಹೋಟೆಲ್ ತಿಂಡಿ ಊಟ ಪದಾರ್ಥಗಳು ಅತಿ [illegible] ಕೂಡಿರುವುದರಿಂದ ಲಾಂಡ್ರಿಗೆ ಹಾಕಿದ್ದರು ಸಹಾ ಕಲೆ ಹೋಗುವುದಿಲ್ಲಾ.

ನಮ್ಮ ರೂಮ್‌ನಲ್ಲಿ ಸೋಫಗಳು ಅತ್ಯಂತ ಸುಚಿಯಾಗಿದ್ದು ತುಂಬಾ ನಯವಾಗಿ ಕಾಣುತ್ತದೆ. ಅದರ ಮೇಲೆ ಒಂದು ತೊಟ್ಟು ಆಹಾರ ಪದಾರ್ಥಗಳು ಬಿದ್ದರು ಸೋಫವು ಗಲೀಜು ಆಗಿ ಕಾಣುತ್ತದೆ ಹಾಗೂ ಊಟ ಮಾಡಲು ಯಾವದೇ ರೀತಿಯಾ ಟೇಬಲ್ ವ್ಯವಸ್ಥೆ ಇರುವುದಿಲ್ಲಾ ಚಿಕ್ಕ ಟಿಪೈ ಮಾತ್ರ ಇರುತ್ತದೆ. ತಮ್ಮ ಗಮನಕ್ಕೆ ತರಲು ಬಯಸುತ್ತೇವೆ ನಾವು ಕಾಫೀ, ಟೀ, ಹಾಲೂ, ಕುಡಿಯಲು ನೀರು ಹಾಗೂ ಪಾನಿಯಗಳನ್ನು 24 ಗಂಟೆಯಲ್ಲೂ ಸರಬರಾಜು ಮಾಡುತ್ತೇವೆ.

ನಮ್ಮ ರೂಮ್‌ನಲ್ಲಿ ಶೇರಿಂಗ್ ವ್ಯವಸ್ಥೆ ಇರುವುದರಿಂದ ರೂಮ್ ನಲ್ಲಿ 3 ಜನ ಹಾಗೂ ಕೆಲವು ಸಂದರ್ಭ 4 ಜನರು ಸಹಾ ವಾಸ್ತವ್ಯ ಹೂಡಿರುತ್ತಾರೆ ಕೊಠಡಿಗಳು ತುಂಬಾ ಚಿಕ್ಕದಾಗಿದ್ದು ಸಂಪೂರ್ಣ ಬೆಳ ಬಟ್ಟೆಗಳಿಂದ ಕೂಡಿರುವ ಕಾರಣ ಹಾಗೂ ಊಟ ಮಾಡುವುದಕ್ಕೆ ಸ್ಥಳವಿಲ್ಲದ ಕಾರಣ ನಾವು ರೋಮ್ ಗೆ ಆಹಾರ ಸರಬರಾಜು ಮಾಡುತ್ತಿಲ್ಲಾ

ನಮ್ಮ ರೆಸ್ಟೋರೆಂಟ್ ಅತಿ ಉತ್ತಮ .ವ್ಯವಸ್ಥೆಯಿಂದ ಕೂಡಿದ್ದು ಹವಾ ನಿಯಂತ್ರಣ ಸ್ಥಳವಾಗಿರುತ್ತದೆ ಹಾಗೂ ಊಟ ಮಾಡಲು ಉತ್ತಮವಾದ ಟೇಬಲ್‌ಗಳು ಮತ್ತು ಚೇರುಗಳು ಇರುತ್ತದೆ. ಒಂದು ಟೇಬಲ್‌ಗೆ ಇಬ್ಬರು ಮಾಣಿಗಳು ಇದ್ದು ಬಿಸಿ ಬಿಸಿಯಾದ ಆಹಾರವನ್ನು ನೀಡಲು ಹಾಗೂ ಅತಿಥಿಗಳಿಗೆ ತೃಪ್ತಿ ಪಡಿಸಲು ರೆಸ್ಟೋರೆಂಟ್ ಅತ್ಯಂತ ಸೂಕ್ತ ಸ್ಥಳವಾಗಿರುತ್ತದೆ. ಅದ್ದರಿಂದ ಈ ಕ್ರಮವನ್ನು ಕೈಗೊಂಡಿರುತ್ತವೆ.

(ಊ) ಉ: ಮಕ್ಕಳು. ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗೆ ಲಿಫ್ಟ್ ವ್ಯವಸ್ಥೆ ಮತ್ತು ವೀಲ್ ಚೇರ್ ವ್ಯವಸ್ಥೆ ಯನ್ನು ಮಾಡಿರುತ್ತೇವೆ ಮತ್ತು ಕವರಿಯುವರಿಗೆ ರೂಮ್ ಸರ್ವೀಸ್ ಸಹಾ ನೀಡುತ್ತೇವೆ.

"ವಂದನೆಗಳೊಂದಿಗೆ"

ಇಂತಿ ತಮ್ಮ ವಿಶ್ವಾಸಿ

Preeti

ವ್ಯವಸ್ಥಾಪಕರು
ಕರ್ನಾಟಕ ಭವನ-3 [illegible]
ಕ.ರಾ.ಪ್ರ.ಅ.ನಿ.ನಿ.
ನಂ. ಎ-5, ಹುಡ್ಕೋ [illegible]
[illegible] - [illegible]